# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 723 (932)
2. ಸದಸ್ಯರ ಹೆಸರು : ಶ್ರೀ ಕೆ. ಗೋವಿಂದರಾಜ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು
3. ಉತ್ತರಿಸಬೇಕಾದ ದಿನಾಂಕ : 12-03-2020
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು.

| ಸಂಖ್ಯೆ | ಪ್ರಶ್ನೆ | ಸಂಸ್ಥೆಯ ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿ ಮೆಟ್ರೋ ಸಂಚಾರ ಮಾರ್ಗಗಳು ಯಾವುವು; ಪ್ರತಿದಿನ ಪ್ರಯಾಣಿಸುವ ಪ್ರಯಾಣಿಕರ ಅಂದಾಜು ಸಂಖ್ಯೆ ಎಷ್ಟು; (ಕಳೆದ 2 ವರ್ಷಗಳ ಅವಧಿಯ ಮಾಹಿತಿಯನ್ನು ಒದಗಿಸುವುದು) | ಬೆಂಗಳೂರು ಮೆಟ್ರೋ ರೈಲು ಯೋಜನೆ ಹಂತ-1ರಲ್ಲಿ ಎರಡು ಕಾರಿಡಾರ್‌ಗಳನ್ನು ಒಳಗೊಂಡಿರುತ್ತದೆ. ಪೂರ್ವ-ಪಶ್ಚಿಮ ಕಾರಿಡಾರ್ 18.10 ಕಿ.ಮೀ. ಬೈಯ್ಯಪ್ಪನ-ಹಳ್ಳಿಯಿಂದ ಮೊದಲುಗೊಂಡು ಮೈಸೂರು ರಸ್ತೆ ಟರ್ಮಿನಲ್‌ನಲ್ಲಿ ಕೊನೆಗೊಳ್ಳುತ್ತದೆ. ಉತ್ತರ-ದಕ್ಷಿಣ ಕಾರಿಡಾರ್‌ಗಳ ಉದ್ದ 24.20 ಕಿ.ಮೀ. ನಾಗಸಂದ್ರದಿಂದ ಮೊದಲುಗೊಂಡು ಯಲಚೇನಹಳ್ಳಿಯಲ್ಲಿ ಕೊನೆಗೊಳ್ಳುತ್ತದೆ.<br><br>ಪ್ರತಿ ದಿನ ಪ್ರಯಾಣಿಸುವ ಪ್ರಯಾಣಿಕರ ಅಂದಾಜು ಸಂಖ್ಯೆ ಸರಾಸರಿ 4 ಲಕ್ಷಗಳು.<br><br>ಕಳೆದ ಎರಡು ವರ್ಷಗಳಲ್ಲಿ ಪ್ರಯಾಣಿಸಿದ ಪ್ರಯಾಣಿಕರ ಸಂಖ್ಯೆ ಕೆಳಕಂಡಂತಿದೆ:<br>i) ಜನವರಿ-2018 ರಿಂದ ಡಿಸೆಂಬರ್ 2018 ರವರೆಗೆ — 13.17 ಕೋಟಿ ಪ್ರಯಾಣಿಕರು<br>ii) ಜನವರಿ-2019 ರಿಂದ ಡಿಸೆಂಬರ್ 2019 ರವರೆಗೆ — 14.18 ಕೋಟಿ ಪ್ರಯಾಣಿಕರು |
| ಆ) | ಬಿ.ಎಂ.ಆರ್.ಸಿ.ಎಲ್ ನಲ್ಲಿ ಕಾರ್ಯ-ನಿರ್ವಹಿಸುತ್ತಿರುವ ಅಧಿಕಾರಿ, ಸಿಬ್ಬಂದಿಗಳು ಎಷ್ಟು; (ತಾಂತ್ರಿಕ, ಆಡಳಿತ ಮತ್ತು ಇತರೆ ವಿಭಾಗದ ಸಿಬ್ಬಂದಿ ಅಧಿಕಾರಿಗಳ ಪ್ರತ್ಯೇಕ ಮಾಹಿತಿ ಒದಗಿಸುವುದು) | ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತದಲ್ಲಿ "ಕಾರ್ಯಾಚರಣೆ ಮತ್ತು ನಿರ್ವಹಣೆ ವಿಭಾಗ" ಮತ್ತು "ಯೋಜನಾ ವಿಭಾಗ" ಎಂಬ ಎರಡು ವಿಭಾಗಗಳಿರುತ್ತವೆ. ಸಂಸ್ಥೆಯು 2010 ರಿಂದ "ಕಾರ್ಯಾಚರಣೆ ಮತ್ತು ನಿರ್ವಹಣೆ ವಿಭಾಗ" ದಲ್ಲಿನ ಹುದ್ದೆಗಳಿಗೆ ಮಾತ್ರ ಸರ್ಕಾರದ ನಿಯಮಗಳನ್ನು ಪಾಲಿಸಿ ಖಾಯಂ ನೇಮಕಾತಿ ಪ್ರಕ್ರಿಯೆ ನಡೆಸಲಾಗಿರುತ್ತದೆ.<br><br>ಸಂಸ್ಥೆಯ ಕಾರ್ಯಾಚರಣೆ ಮತ್ತು ನಿರ್ವಹಣೆ ವಿಭಾಗದಲ್ಲಿ ಪ್ರಸ್ತುತ 1196 ಖಾಯಂ ಉದ್ಯೋಗಿಗಳು, 297 ಗುತ್ತಿಗೆ ಉದ್ಯೋಗಿಗಳು ಹಾಗೂ ಯೋಜನಾ ವಿಭಾಗದಲ್ಲಿ 893 ಗುತ್ತಿಗೆ ಉದ್ಯೋಗಿಗಳು ಮತ್ತು 31 ಉದ್ಯೋಗಿಗಳು ನಿಯೋಜನೆ ಮೇರೆಗೆ ಕಾರ್ಯನಿರ್ವಹಿಸಿರುತ್ತಾರೆ. |
| ಇ) | ಬಿಎಂಆರ್‌ಸಿಎಲ್ ನಲ್ಲಿ ಕನ್ನಡಿಗರಿಗೆ ಉದ್ಯೋಗಾವಕಾಶಗಳು ಲಭ್ಯವಾಗುತ್ತಿಲ್ಲ ಎಂಬುದು ನಿಜವೇ; ಹಾಗಿದ್ದಲ್ಲಿ, ಒಟ್ಟು ಸಿಬ್ಬಂದಿಗಳು ಮತ್ತು ಕನ್ನಡಿಗ ಅಭ್ಯರ್ಥಿಗಳೆಷ್ಟು (ಪ್ರತ್ಯೇಕ ಮಾಹಿತಿ ಒದಗಿಸುವುದು) | ಸಂಸ್ಥೆಯ ಕಾರ್ಯಾಚರಣೆ ಮತ್ತು ನಿರ್ವಹಣೆ ವಿಭಾಗದಲ್ಲಿ ಮಾತ್ರ ಖಾಯಂ ಹುದ್ದೆಗಳಿದ್ದು, (ಅಸಿಸ್ಟೆಂಟ್ ಮ್ಯಾನೇಜರ್, ಸೆಕ್ಷನ್ ಇಂಜಿನೀಯರು, ಸ್ಟೇಷನ್ ಕಂಟ್ರೋಲರ್/ ಟ್ರೈನ್ ಆಪರೇಟರ್‌ಗಳು, ಜ್ಯೂನಿಯರ್ ಇಂಜಿನೀಯರ್, ಕಸ್ಟಮರ್ ರಿಲೇಷನ್ ಮ್ಯಾನೇಜರ್, ಅಸಿಸ್ಟೆಂಟ್, ಮೇಂಟೇನರ್‌ಗಳು, ಅನ್-ಸ್ಕಿಲ್ಡ್ ಮತ್ತು |

| | | |
|---|---|---|
| | | ಟ್ರ್ಯಾಕ್-ಮೆನ್) ಈ ಹುದ್ದೆಗಳಿಗೆ ಮಾತ್ರ ನೇರ ನೇಮಕಾತಿ ಮಾಡಿದ್ದು, ಈ ವಿಭಾಗದಲ್ಲಿ ಅವಶ್ಯವಿರುವ ನಾನ್-ಎಕ್ಸಿಕ್ಯೂಟಿವ್ ಹುದ್ದೆಗಳಿಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಲಿಖಿತ ಪರೀಕ್ಷೆ ನಡೆಸಿ ಸಂಪೂರ್ಣ ಪಾರದರ್ಶಕತೆಯಿಂದ ಸರ್ಕಾರದ ನಿಯಮಗಳನ್ನು ಪಾಲಿಸಿ ನೇಮಕಾತಿಯನ್ನು ಮಾಡಲಾಗುತ್ತಿದೆ. ಈ ಹುದ್ದೆಗಳಿಗೆ ಅರ್ಜಿ ಹಾಕುವವರಿಗೆ ಕಡ್ಡಾಯವಾಗಿ ಕನ್ನಡ ಓದಲು, ಬರೆಯಲು, ಮಾತನಾಡಲು ಮತ್ತು ಅರ್ಥಮಾಡಿಕೊಳ್ಳಲು ಶಕ್ತರಾಗಿರಬೇಕೆಂಬ ನಿಬಂಧನೆಯನ್ನು ನಿಗಮವು ಅರ್ಜಿ ಸಲ್ಲಿಸುವ ಹಂತದಲ್ಲೆ ವಿಧಿಸಿರುತ್ತದೆ. ಇವು ಇಲ್ಲವಾದಲ್ಲಿ ಅಂತಹ ಅಭ್ಯರ್ಥಿಗಳನ್ನು ನಿಗಮವು ನೇಮಕಾತಿಗೆ ಪರಿಗಣಿಸುವುದಿಲ್ಲ.<br><br>ಪ್ರಸ್ತುತ ಕೆಲಸ ನಿರ್ವಹಿಸುತ್ತಿರುವ 1196 ಖಾಯಂ ನಾನ್‌ಎಕ್ಸಿಕ್ಯೂಟಿವ್ ಉದ್ಯೋಗಿಗಳಲ್ಲಿ, ಮಾಜಿ ಸೈನಿಕ ಉದ್ಯೋಗಿಗಳೂ ಇದ್ದು 18 ಉದ್ಯೋಗಿಗಳು ಕನ್ನಡೇತರರು ಇದ್ದಾರೆ, ಉಳಿದೆಲ್ಲಾ ಉದ್ಯೋಗಿಗಳು ಕನ್ನಡಿಗರಾಗಿದ್ದು ಕನ್ನಡ ಬಲ್ಲವರಾಗಿದ್ದು ಕನ್ನಡದಲ್ಲಿ ವ್ಯವಹರಿಸಲು ಸಶಕ್ತರಿದ್ದಾರೆ. ಇವರಲ್ಲದೆ, ತಾಂತ್ರಿಕ ವಿಭಾಗದಲ್ಲಿ ಪರಿಣಿತರಾಗಿರುವ 298 ಉದ್ಯೋಗಿಗಳು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಅವರಲ್ಲಿ 285 ಉದ್ಯೋಗಿಗಳು ಕನ್ನಡ ಬಲ್ಲವರಾಗಿದ್ದು ಉಳಿದ 13 ಉದ್ಯೋಗಿಗಳು ಕನ್ನಡೇತರರು ಆಗಿದ್ದಾರೆ. ಈ ವಿಭಾಗದಲ್ಲಿ, 711 ಗೃಹರಕ್ಷಕ ಸಿಬ್ಬಂಧಿಯನ್ನು ಪೊಲೀಸ್ ಇಲಾಖೆಯಿಂದ ಹಾಗೂ 178 ಸಿಬ್ಬಂದಿಯನ್ನು ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯಿಂದ ಭದ್ರತಾಸೇವೆಗಾಗಿ ನಿಯೋಜಿಸಲಾಗಿದ್ದು, ಈ ಎಲ್ಲಾ 889 ಸಿಬ್ಬಂದಿ ಸ್ಥಳೀಯರಾಗಿದ್ದು ಕನ್ನಡ ಓದಲು, ಬರೆಯಲು ಮತ್ತು ಕನ್ನಡದಲ್ಲಿ ವ್ಯವಹರಿಸಲು ಸಶಕ್ತರಿದ್ದಾರೆ.<br><br>**ಯೋಜನಾ ವಿಭಾಗ** : ಈ ವಿಭಾಗದಲ್ಲಿ ಯಾವುದೇ ಖಾಯಂ ಹುದ್ದೆಗಳಿರುವುದಿಲ್ಲ. ಅವಶ್ಯಕತೆಗನುಗುಣವಾಗಿ ಈ ವಿಭಾಗದಲ್ಲಿ 900 ಉದ್ಯೋಗಿಗಳು ಗುತ್ತಿಗೆ ಆಧಾರದ ಮೇಲೆ ಹಾಗೂ 30 ಉದ್ಯೋಗಿಗಳು ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ವಿಭಾಗದಲ್ಲಿನ ಎಲ್ಲಾ ಹುದ್ದೆಗಳು ತಾತ್ಕಾಲಿಕ ಹುದ್ದೆಗಳಾಗಿದ್ದು ಯೋಜನೆ ಮುಗಿಯುವವರೆಗೆ ಮಾತ್ರ ಜಾರಿಯಲ್ಲಿದ್ದು ಯೋಜನೆ ಮುಗಿದ ನಂತರ ಈ ಹುದ್ದೆಗಳು ತನ್ನಿಂತಾನೆ ರದ್ದಾಗುತ್ತವೆ. ಈ ವಿಭಾಗದಲ್ಲಿ ಅಗತ್ಯವಿರುವ ಬಹುತೇಕ ಉದ್ಯೋಗಿಗಳನ್ನು ಇದೇ ರೀತಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ |

| | | |
|---|---|---|
| | | ಹೊಂದಿರುವವರನ್ನು ಉದ್ಯೋಗ ಪ್ರಕಟಣೆಗಳ ಮೂಲಕ ನಿಗದಿತ ಅವಧಿಯ ಗುತ್ತಿಗೆ ಉದ್ಯೋಗಕ್ಕಾಗಿ ಪ್ರಕಟಿಸಿ ಆಯ್ಕೆ ಮಾಡಲಾಗುತ್ತಿದೆ. ಈ ಆಧಾರದ ಮೂಲಕ ಕೇಂದ್ರ ಸರ್ಕಾರದ ಇಲಾಖೆಗಳಾದ ರೈಲ್ವೆ ಇಲಾಖೆ, ಬಿ.ಎಸ್.ಎನ್.ಎಲ್, ದೂರಸಂಪರ್ಕ ಇಲಾಖೆ, ಮುಂತಾದ ಇಲಾಖೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ/ ನಿರ್ವಹಿಸಿ ಅನುಭವ ಹೊಂದಿ ನಿವೃತ್ತಿಗೊಂಡಿರುವ ಉದ್ಯೋಗಿಗಳ ಸೇವೆಯನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಮತ್ತು ಸರ್ಕಾರದ ಇತರೆ ಇಲಾಖೆಗಳಿಂದ ಎರವಲು ಸೇವೆ ಮೇಲೆ ಪಡೆದು ಮೆಟ್ರೋ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.<br><br>ಪ್ರಸ್ತುತ ಯೋಜನಾ ವಿಭಾಗದಲ್ಲಿ ಕೆಲಸನಿರ್ವಹಿಸುತ್ತಿರುವ 893 ಗುತ್ತಿಗೆ ಆಧಾರದ ಉದ್ಯೋಗಿಗಳಲ್ಲಿ 784 ಉದ್ಯೋಗಿಗಳು ಕನ್ನಡ ಬಲ್ಲವರಾಗಿದ್ದು ಕನ್ನಡದಲ್ಲಿ ವ್ಯವಹರಿಸಲು ಸಶಕ್ತರಿದ್ದು ಉಳಿದ 109 ಉದ್ಯೋಗಿಗಳು ಕನ್ನಡೇತರರು ಆಗಿದ್ದಾರೆ. |
| ಈ | ಬಿಎಂಆರ್‌ಸಿಎಲ್‌ನಲ್ಲಿ ಕನ್ನಡಿಗರಿಗೆ ಹೆಚ್ಚಿನ ಉದ್ಯೋಗಾವಕಾಶ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ಮಾಹಿತಿ ಒದಗಿಸುವುದು) | ಸಂಸ್ಥೆಯು ಹಂತ-1ರ ಯೋಜನಾ ಅನುಷ್ಠಾನದ ಅವಧಿಯಲ್ಲಿ ಪಡೆದ ತಾಂತ್ರಿಕ ನೈಪುಣ್ಯತೆಯ ಆಧಾರದ ಮೇಲೆ ಮೆಟ್ರೋ ರೈಲು ಹಂತ-2ರ ಯೋಜನೆಯನ್ನು ಆಂತರಿಕವಾಗಿ ಅನುಷ್ಠಾನಗೊಳಿಸುತ್ತಿದೆ. ಹಂತ-2ರ ಯೋಜನಾ ಅನುಷ್ಠಾನಕ್ಕೆ ಅವಶ್ಯವಿರುವ ಹೆಚ್ಚುವರಿ ತಾಂತ್ರಿಕ ಸಿಬ್ಬಂದಿಯನ್ನು ವಿವಿಧ ಕ್ಷೇತ್ರಗಳಲ್ಲಿ ಅನುಭವ ಹೊಂದಿದವರನ್ನು ಗುತ್ತಿಗೆ ಆಧಾರದ ಮೇಲೆ/ ಎರವಲು ಸೇವೆ ಮೇಲೆ ಪಡೆದುಕೊಳ್ಳುವುದರ ಮೂಲಕ ಯೋಜನಾ ಅನುಷ್ಠಾನ ಮತ್ತು ಮೇಲ್ವಿಚಾರಣೆ ನಡೆಸುತ್ತಿದೆ. ಹಂತ ಹಂತವಾಗಿ ಮೆಟ್ರೋ ತಾಂತ್ರಿಕತೆಯಲ್ಲಿ ಅನುಭವ ಹೊಂದಿದ ಮತ್ತು ಕನ್ನಡ ಬಲ್ಲ ಅಧಿಕಾರಿಗಳನ್ನು ನೇಮಿಸಿಕೊಳ್ಳಲು ಕ್ರಮ ವಹಿಸಲಾಗುತ್ತಿದೆ. |

ಕಡತ ಸಂಖ್ಯೆ: ನಅಇ 66 ಪಿ.ಆರ್.ಜೆ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿಗಳು